ಉಷಾ ಬೂದಿಗೆರೆ, ಬೆಂಗಳೂರು
ಗರಂ ದೋಸೆ ಬೇಕು, ಗರಂ ಹೆಂಡತಿ ಬೇಡ. ಯಾಕೆ?



ಗರಿಗರಿ ಎನ್ನುವುದರ ಹಿತ ಗುರುಗುರು ಎನ್ನುವುದರಲ್ಲಿ ಇರುವುದಿಲ್ಲ.

ಪಾರ್ವತಿ ರಮೇಶ್, ಮೈಸೂರು
ಹಣ ಕಂಡರೆ ಹೆಣವೂ ಬಾಯಿ ಬಿಡುತ್ತಿತ್ತು. ಈಗ ಕೊರೊನಾಗೆ ಹೆದರಿ ಹೆಣವೂ ಬಾಯಿ ಮುಚ್ಚಿದೆಯಲ್ಲ...?
ಅದು ಬಾಯ್ಮುಚ್ಚಿಲ್ಲ; ಕರೋನಾ ಹೆಸರಲ್ಲಿ ಹೆಣವನ್ನೂ ದೋಚುತ್ತಿರುವುದನ್ನು ಕಂಡು ಮೂಕವಿಸ್ಮಿತವಾಗಿದೆ.

ಜೆ.ಜಿ.ಹಳ್ಳಿ ಚಿದಾನಂದ, ಹಿರಿಯೂರು
ಮಾನ ಕಳೆದುಕೊಂಡವರು ಪ್ರಾಣ ಇಟ್ಟುಕೊಳ್ಳುವುದು ಸರಿಯೆ?
ಮಾನಗೇಡಿಗಳೆಲ್ಲ ಸಾಯಬೇಕೇನು? ಮರಳಿ ಘನತೆ ಗಳಿಸುವುದೆ ಜೀವನ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಕೊರೊನಾ ಸೋಂಕು ಬಡವರಿಗೆ ಪ್ರಾಣಸಂಕಟವಾದರೂ ಕೆಲವರು ಇದರ ಹೆಸರಲ್ಲಿ ಚೆಲ್ಲಾಟವಾಡುತ್ತಿದ್ದಾರಲ್ಲಾ?



ಪ್ರಕೃತಿನಿಯಮ. ಮುಳ್ಳು ಚುಚ್ಚುವುದೇ ಬರಿಗಾಲಿಗೆ.

ಎಂ.ಎ. ಕುಮಾರ್, ಬೆಂಗಳೂರು
ಸಾವಿನ ದಿನ ಮೊದಲೇ ತಿಳಿಯುವಂತಿದ್ದಿದ್ದರೆ?
ಎಷ್ಟೋ ಜನ ಹಿಂದಿನ ದಿನ ಮೋಸ, ಸಾಲ ಮಾಡಲು ಹೇಸುತ್ತಿರಲಿಲ್ಲ.

ಹೆಚ್.ವಿ. ಶ್ರೀಧರ್, ಬೆಂಗಳೂರು
ಹೆಂಡತಿಗೆ ವಿಚ್ಛೇದನ ಕೊಟ್ಟವರೇ ಸತಿ–ಪತಿ ಸಾಮರಸ್ಯದ ಬಗ್ಗೆ ಭಾಷಣ ಮಾಡುವರಲ್ಲಾ?
ಸರಿಯೇ. ಸಿಹಿತಿಂಡಿಯ ಸವಿಯನ್ನು ಮಧುಮೇಹಿಯೇ ಬಲ್ಲ!

ಚೆನ್ನವೀರಪ್ಪ ಬಿದರಹಳ್ಳಿ
ಪ್ರಕೃತಿಗೂ, ಸಂಸ್ಕೃತಿಗೂ, ವಿಕೃತಿಗೂ ಇರುವ ವ್ಯತ್ಯಾಸವೇನು?
ಪ್ರಕೃತಿಯನ್ನು ಆದರಿಸುವುದೇ ಸಂಸ್ಕೃತಿ; ಅದುರಿಸುವುದೇ ವಿಕೃತಿ.

ಆರ್. ಮುರಳೀಧರ, ಹುಲಿಕೆರೆ
ಪಾರ್ಟಿ ಮಾಡೋವ್ರು ಕ್ವಾಟ್ರೋ ಹಾಫೋ ಫುಲ್ಲೋ ಹಾಕ್ತೀ ಇರಲ್ವಾದ್ರೂ ಶುರೂಲಿ ನೈಂಟಿ ಹಾಕೋಣ ಅಂತಾರಲ್ಲ?
ಕುಳಿತಿರುವ ಕೋನ ಏರಿಸುವ ಪ್ರಮಾಣದ ಸೂಚಕ; ಲಂಬಕೋನದಲ್ಲಿರುವಾಗ ನೈಂಟಿಯದಷ್ಟೇ ಚಿಂತೆ.

ಬಿ.ಎಸ್. ಮುಳ್ಳೂರ, ಹಲಗತ್ತಿ
ಹೆಣ್ಣಿನ ವಯಸ್ಸು, ಗಂಡಿನ ಪಗಾರ ಕೇಳಬಾರದು. ತಮ್ಮನ್ನು ಏನು ಕೇಳಬಾರದು?
'ಸ್ವಲ್ಪ ಸಾಲ ಬೇಕಿತ್ತು...' ಎಂದು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು
ಕಮಲನಯನ, ಕಮಲವದನ, ಪದ್ಮನಾಭ, ಚರಣಕಮಲ ಎಂದೆಲ್ಲ ಸ್ತುತಿಸಲಾಗುವ ದೇವ ಪೂರ್ಣವಾಗಿ ಕಮಲಮಯನೇ?
ದೇವಿಯರೂ ಡಿಟೋ ಡಿಟೋ ಆದ್ದರಿಂದ ದೇವ ಹಾಗಿರಬೇಕಾದ್ದು ಅನಿವಾರ್ಯ.

ಸುಬ್ಬಲಕ್ಷ್ಮಿ ಹೆಚ್.ಕೆ. ಕೋಲಾರ
ಆತ್ಮೀಯತೆ ಎಂದರೇನು?
ತಿಳಿದವರಿಗೆ ವಿವರಿಸಬೇಕಾಗಿಲ್ಲದ, ತಿಳಿಯದವರಿಗೆ ವಿವರಿಸಿಯೂ ಪ್ರಯೋಜನವಾಗದ ಒಂದು ಬಂಧ.

ವಿ. ತಿಪ್ಪೇಸ್ವಾಮಿ, ಹಿರಿಯೂರು
ಸರ್ಕಾರಿ ಆಸ್ಪತ್ರೆಗಳ ಚಿಕಿತ್ಸೆಯ ಮೇಲೆ ನಮ್ಮ ನಾಯಕರಿಗೆ ನಂಬಿಕೆ ಇಲ್ಲ ಅಲ್ಲವೇ...?
ತಾವೇ ಜಾತ್ಯಾಧಾರಿತವಾಗಿ ಆರಿಸಿದವರ ಅರ್ಹತೆಯ ಬಗ್ಗೆ ಅವರಿಗೆ ಗೊತ್ತಿರುವುದರಿಂದ...

ಎನ್. ವೈದೇಹಿ, ಮೈಸೂರು
ಮಕ್ಕಳಿಗೆ ಸಕಲ ಸವಲತ್ತನ್ನು ಕೊಡುವ ಪೋಷಕರು ಅವರಿಗಾಗಿ ಸಮಯವನ್ನೇಕೆ ಕೊಡುವುದಿಲ್ಲ?
ಸಮಯ ಖರೀದಿಗೆ ಸಿಗುತ್ತಿಲ್ಲವಂತೆ.

## ಬಹುಮಾನಿತ ಪ್ರಶ್ನೆ

ಚನ್ನಬಸವ ಪುತ್ತೂರು, ಚಿತ್ರದುರ್ಗ
ಲಾಕ್‌ಡೌನಲ್ಲಿ ಪೂಜೆ ಇಲ್ಲದಾಗ ದೇವರಿಗೆ ಏನನ್ನಿಸಿತೋ...?
ಕೆಲವು ದಿನಗಳ ಮಟ್ಟಿಗಾದರೂ ಶುದ್ಧ ಏಕಾಂತದ ಸೊಬಗು ದೊರಕಿತೆಂದು.

ಎಸ್. ಪುಷ್ಪಲತಾ, ಚಿತ್ರಳ್ಳಿ
ಅಪ್ಪ ಅಮ್ಮನ ಜವಾಬ್ದಾರಿ ಬೇಡ ಅನ್ನುವ ನನ್ನಕ್ಕ ಆಸ್ತಿಯಲ್ಲಿ ಸಮಪಾಲು ಕೇಳುವಳಲ್ಲ ರಾಮ್?
ಹಣ ಕೊಟ್ಟು ಹೊರಹಾಕಿ. ಗ್ಯಾಂಗ್ರೀನ್ ಆದಾಗ ಕೂಡಲೆ ಕತ್ತರಿಸುವುದೇ ಆರೋಗ್ಯಕರ.

ಅನಸೂರ ಟಿ. ಕೇದಿಗೆಮನೆ
ಗಣೇಶನ ಮೂರ್ತಿಯನ್ನು ಮನಸ್ಸಿಗೆ ಬಂದಹಾಗೆ ಮಾಡುವುದು ಸರಿಯೆ?
ಹ್ಞ! ಪೂಜೆಗೆ ಬೇಕಾದ್ದು ಆಕಾರವಲ್ಲ; ಆಚಾರ, ವಿಚಾರ.

ಜಿ. ಸುಬ್ರಹ್ಮಣ್ಯ, ಬೆಂಗಳೂರು
ಹನುಮಂತ ನಮ್ಮವನೆಂದು ಕರ್ನಾಟಕದವರೂ, ತಮ್ಮವನೆಂದು ಅನ್ಯ ರಾಜ್ಯದವರೂ ಬೀಗುವರಲ್ಲಾ, ವಾಸ್ತವಾಂಶವೇನು?



ಮೂರ್ತಿಯ ಆಕಾರದ ಆಧಾರದ ಮೇಲಂತೂ ಅವನು ವಿಶ್ವಕ್ಕೇ ಸೇರಿದವನು.

ಸೂರ್ಯಪ್ರಕಾಶ್, ಚಿನ್ನಾಗನಹಳ್ಳಿ
ನಿಮಗೆ ಒಳ್ಳೆ ಉತ್ತರ ಹೊಳೆಯುವಂಥ ಪ್ರಶ್ನೆಯನ್ನೇ 'ಬಹುಮಾನಿತ ಪ್ರಶ್ನೆ' ಎಂದು ನಿರ್ಧರಿಸುವಿರಂತೆ. ಇದು ಸರಿಯೆ ರಾಮ್?
ಉತ್ತರಿಸುವರ ಬಹು(ಸೊಸೆ) ಮಾನ್ಯ ಮಾಡಿದ್ದೇ ಬಹುಮಾನಿತ ಎಂದವರೂ ಇದ್ದಾರೆ!

ವಿ. ಹಮೀದ್, ವಿಟ್ಲ
ಹಿಂದಿನ ಸಿನಿಮಾಗಳಲ್ಲಿ ಲವರ್ಸ್ ಮರ ಸುತ್ತುತ್ತಿದ್ದರು. ಇಂದಿನ ಸಿನಿಮಾಗಳಲ್ಲಿ?
ಕ್ಯಾಮೆರ ಸುತ್ತುತ್ತಾರೆ.

**ರಾಮ್**

ಪ್ರಶ್ನೆ ಕಳುಹಿಸಲು: **editorsu@sudha.co.in**